ನಕ್ಕಾಗಿನ ಶಬ್ದ ಮತ್ತೊಂದು ರೀತಿಯಿರುತ್ತಿತ್ತು. ಅವರ ಹಾಳು ನಗು ಯಾವ ರೀತಿಯದ್ದಾದರೂ ಇರಲಿ, ತಮಗ್ಯಾಕೆ ಬೇಕು ಇಲ್ಲದ ಉಸಾಬರಿ ಎಂದು ಆ ಗುಂಪಿನಿಂದ ದೂರ ಸರಿಯುವಂತೆಯೂ ಇರಲಿಲ್ಲ. ಕುತೂಹಲದ ಬಾವಿಯೊಳಗೆ ತಾನಾಗಿಯೇ ಬಿದ್ದಿರುವ ಮನಸ್ಸನ್ನು ಅಷ್ಟು ಬೇಗ ಎತ್ತಲಿಕ್ಕಾಗುತ್ತದೆಯೇ? ಗುಂಪಿನಲ್ಲಿ ಯಾರು ನಕ್ಕರು ಮತ್ತು ಯಾರು ಮಾತಾಡಿದರು ಎಂಬುದನ್ನು ಪರೀಕ್ಷಿಸಲೆಂದೆ ಕೆಲವು ಗಂಡಸರು ಯಾವುದೋ ನೆಪದಿಂದ ಅಲ್ಲಿ ಜಮಾಯಿಸುತ್ತಿದ್ದರು. ನಗುವಂತಹ ವಿಷಯವನ್ನು ಹೇಳಿದ ಹೆಂಗಸರಾರು ಹಾಗೂ ಕೂಡಿದ ಅಷ್ಟು ಮಂದಿಯಲ್ಲಿ ನಕ್ಕವರಾರು ಎಂಬುದು ಗೊತ್ತಾಗದೆ ಹೋಗುತ್ತಿತ್ತು. ಒಬ್ಬಳ ಕಣ್ಣಿನ ಲಾಸ್ಯ ಮತ್ತೊಬ್ಬಳ ಕಣ್ಣಿಗೆ ಕ್ಷಣಾರ್ಧದಲ್ಲಿ ಹರಿಯುತ್ತಿತ್ತು. ಒಬ್ಬಳ ಮೂಗಿನ ಮೇಲೆ ಸುಳಿದಾಡುವ ಬೆರಗು ನೋಡನೋಡುವಷ್ಟರಲ್ಲಿ ಮತ್ತೊಬ್ಬಳ ಮೂಗಿನ ನತ್ತಿನಲ್ಲಿರುತ್ತಿತ್ತು. ಅದಕ್ಕಾಗಿ ಹೆಂಗಸರು ಒಂದೊಂದು ಸಲ ಹೀಗೂ ಮಾಡುತ್ತಿದ್ದರು. ತಮ್ಮ ಗಂಡಸರು ಹೆಣ್ಣುಮಕ್ಕಳನ್ನು ಎಷ್ಟೇ ಬೈಯ್ದರೂ ಕೂಡ ಅವರು ಅಲ್ಲಿ, ಇಲ್ಲಿ, ಅಗಸಿಯಲ್ಲಿ, ಬಾವಿದಂಡಿಯಲ್ಲಿ, ಹೊಲದ ಬದುವಿನಲ್ಲಿ ಹೇಳದೆ ಕೇಳದೆ ಸೇರುತ್ತಿದ್ದರು ಮತ್ತು ಹೇಳದೆ ಕೇಳದೆ ಕದಲುತ್ತಿದ್ದರು. ನಾಲಿಗೆಯನ್ನು ಮೂಗಿಗೆ ಮುಟ್ಟಿಸುವ ಒಂದು ಹೊಸ ಆಟವನ್ನು ಪುಂಡಲೀಕ ಹುಡುಗರಿಗೆಲ್ಲ ಕಲಿಸಿಕೊಟ್ಟಿದ್ದ! ವಿದ್ಯಾರ್ಥಿಗಳೆಲ್ಲ ಅದೇ ಮೋಜಿನಲ್ಲಿ ಕಾಲ ಕಳೆಯತೊಡಗಿದ್ದರು. ಶಾಲೆಯಲ್ಲಿ ಅವನು ಹುಡುಗರನ್ನು ಒಲಿಸಿಕೊಂಡು ಅವರ ಅಚ್ಚುಮೆಚ್ಚಿನವನಾಗತೊಡಗಿದ್ದ.

ಹಿಂದಿನ ಪುಂಡಲೀಕನನ್ನು ನೋಡದವರಿಗೆ ಅವನು ಈಗ ಅತ್ಯಾಕರ್ಷಕನಾಗಿ ಕಾಣುತ್ತಿದ್ದ. ಪಿ.ಯು.ಸಿ ಫೇಲಾಗಿದ್ದ ಅವನು ಊರಲ್ಲಿ ರಿಕಾಮಿಯಾಗಿ ತಿರುಗುತ್ತಿದ್ದ. ಅವನು ಆಗ ಯಾರಿಂದ ಹೊಡಿಸಿಕೊಂಡಿಲ್ಲ. ಮನೆಯಲ್ಲಿ ಅಪ್ಪನಿಂದ ಹಿಡಿದು ಶಾಲೆಯ ಸಿಪಾಯಿಯವರೆಗೆ ಎಲ್ಲರೂ ಆವನಿಗೆ ಬೈದವರೆ. ಐದಾರು ವರ್ಷ ಊರು ಬಿಟ್ಟಿದ್ದ ಅವನನ್ನು ಬಹುತೇಕ ಎಲ್ಲರೂ ಮರೆತಿದ್ದರು. ಪುಂಡಲೀಕನೆಂದರೆ ಆ ದಿನಗಳಲ್ಲಿ ಎಲ್ಲರಿಗೆ ಸಿಟ್ಟು. ಸಂಶಯವಂತೂ ವಿಪರೀತ. ಕೆಲವು ಹೆಂಗಸರಂತೂ ಅವನ ಬಗ್ಗೆ ಹಿಗ್ಗಾಮುಗ್ಗಾ ಮೂಗು ಮುರಿಯುತ್ತಿದ್ದರು. ಆ ಸಮಯದಲ್ಲಿ ತಾವು ಆ ರೀತಿ ವರ್ತಿಸಿದ್ದಕ್ಕೆ ಪಶ್ಚಾತ್ತಾಪವಿಲ್ಲ ಎಂಬುದು ಅವರ ಮೂಗು ಮುರಿಯುವಿಕೆಯಿಂದಲೇ ತಿಳಿಯುತ್ತಿತ್ತು. ಆದರೆ ಅವರ ಮೂಗುಗಳಿಗೆ ಆವಾಗ ಇದ್ದ ಬಲ ಈಗ ಇಲ್ಲ ಎಂಬುದು ಅವನು ಈಗ ಗಳಿಸುತ್ತಿರುವ ಮರ್ಯಾದೆಯನ್ನು ನೋಡಿದಾಗ ಅವರಿಗೆ ಅನ್ನಿಸುತ್ತದೆ. ಬಯಲಕಡೆ ಹೋಗುವ ಹೆಂಗಸರನ್ನು ಹಿಂಬಾಲಿಸುತ್ತಾನೆಂಬುದು ಪುಂಡಲೀಕನ ಬಗ್ಗೆ ಇರುವ ಒಂದು ಬಹು ದೊಡ್ಡ ಆಪಾದನೆಯಾಗಿತ್ತು. ಇಂತಹ ಹಲಕಟ್ ಚಾಳಿಯಿಂದಲ್ಲವೇ ಅವನು ಶಾಲೆಯಲ್ಲಿ ಬಡಿಸಿಕೊಂಡಿದ್ದು ಮತ್ತು ಶತದಡ್ಡನೆಂದು ಸಾವಿರ ಸಲ ಅನಿಸಿಕೊಂಡಿದ್ದು? ಅವರು ತುಂಬಿದ ತಂಬಿಗೆ ಹಿಡಿದು ಹೊರಗೆ ಹೋಗಬೇಕೆನ್ನುವ ಸಮಯಕ್ಕೆ ಸರಿಯಾಗಿ ಆ ದಾರಿಯಲ್ಲಿ ಏನೋ ಕೆಲಸವಿದ್ದವರಂತೆ ಇವನು ಹೊರಡುತ್ತಿದ್ದ. ಅವನ ಮನೆಯಲ್ಲಿ ಹತ್ತು ವರ್ಷಗಳಿಂದ ಉಪಯೋಗದಲ್ಲಿರುವ ಹಸಿರು ಪ್ಲಾಸ್ಟಿಕ್ ಚರಿಗಿ ಹಿಡಿದು ಅವರ ಬೆನ್ನು ಹತ್ತುತ್ತಿದ್ದ. ಅವನ ಅಜ್ಜಿ ಹನುಮಂತದೇವರ ಜಾತ್ರೆಯಲ್ಲಿ ಕೊಂಡುಕೊಂಡಿದ್ದ ಈ ಚರಿಗೆಯ ಹಸಿರು ಬಣ್ಣ ಹೊರಟುಹೋಗಿ ಈಗ ಮತ್ತೊಂದು ತೆರನಾದ ಹಸಿರನ್ನು ಅದು ಪಡೆದಿತ್ತು. ಅದರ ಕಂಠ ಕಿತ್ತುಹೋಗಿ ಅದು ಯಾವಾಗ ಕೈಯಿಂದ ಜಾರಿಹೋಗುವುದೋ ಎನ್ನುವ ಹೆದರಿಕೆಯಲ್ಲಿ ಅದನ್ನು ಬಹಳಷ್ಟು ಚಾಕಚಕ್ಯತೆಯಲ್ಲಿ ಹಿಡಿದುಕೊಳ್ಳಬೇಕಾಗಿತ್ತು.

ಪುಣ್ಯಕ್ಕೆ ಈ ಊರಿನಲ್ಲಿ ಗಂಡಸರು ರಸ್ತೆಯ ಎಡಗಡೆಗೆ ಬೈಲಕಡೆ ಹೋಗುವುದೆಂದೂ ಹೆಂಗಸರು ಬಲಗಡೆ ಹೋಗುವುದೆಂದೂ ಬಲುಹಿಂದೆಯೇ ತೀರ್ಮಾನವಾಗಿತ್ತು. ಮೇಲಾಗಿ